ಓಎಸ್. 14/2020 ಪಿಡಬ್ಲ್ಯೂ:1

ದಿನಾಂಕಃ 23.08.2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಒಂದು ಮತ್ತು ಎರಡನೇ ಪ್ರತಿವಾದಿಗಳ ಪರ ಶ್ರೀ ಐ ಎಸ್ ವಕೀಲರಿಂದಃ

ಎರಡನೇ ವಾದಿ ನನ್ನ ಚಿಕ್ಕಪ್ಪನ ಮಗಳ ಮಗಳು. ಮೂರನೇ ವಾದಿ ಬಸವಣ್ಣ ರವರು ನನ್ನ ತಮ್ಮ . ನಾನು ಈಗ ಶಿವಮೊಗ್ಗ ಜಿಲ್ಲೆ , ಶಿಕಾರಿಪುರ ತಾಲ್ಲೂಕು , ಸಾಲೂರು ಗ್ರಾಮದಲ್ಲಿ ವಾಸವಾಗಿದ್ದೇನೆ. ಎರಡನೇ ವಾದಿ ಮಂಗಳಮ್ಮ ಮೈಸೂರಿನಲ್ಲಿ ವಾಸವಾಗಿದ್ದಾರೆ. ಮೂರನೇ ವಾದಿ ಬಸವಣ್ಣ ಹೊನ್ನಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. ನಾನು ಸುಮಾರು 45 ವರ್ಷಗಳಿಂದ ಸಾಲೂರು ಗ್ರಾಮದಲ್ಲಿ ವಾಸವಾಗಿದ್ದೇನೆ. ದಾವಾ ಆಸ್ತಿಗಳು ಮರಪ್ಪ ನವರಿಗೆ ಸೇರಿದ ಆಸ್ತಿಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ದಾವಾ ಆಸ್ತಿಗಳು ಮರಪ್ಪ ನವರಿಗೆ ಸೇರಿದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ.

2. ಮರಪ್ಪ ನವರು ಮಾದಮ್ಮ ಎಂಬುವವರನ್ನು ಮದುವೆ ಯಾಗಿದ್ದರು ಎಂದರೆ ಸರಿ. ಮರಪ್ಪ ನವರಿಗೆ ಇಬ್ಬರು ಗಂಡು ಮಕ್ಕಳು ಇದ್ದರು ಎಂದರೆ ಸರಿ. ನಾವು ವಾದಿಗಳು ಚೆನ್ನಬಸಪ್ಪ ಅವರ ಕುಟುಂಬದ ಚೆನ್ನಬಸಪ್ಪ ನವರ ಕಾನೂನು ಬದ್ದ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ಪುಟ್ಟಬಸಪ್ಪ ಮತ್ತು ಚೆನ್ನಬಸಪ್ಪ ರವರು ತಮ್ಮ ಜೀವಿತ ಕಾಲದಲ್ಲಿ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ದಾವಾ ಐಟಂ ನಂ. 2 ಸ್ವತ್ತನ್ನು ಒಂದನೇ ಪ್ರತಿವಾದಿಯ ಗಂಡ ಸುಬ್ಬಣ್ಣರವರು 1967 ರಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಅಂದಿನಿಂದ ಐಟಂ ನಂ. 2 ಸ್ವತ್ತಿನ ಮಾಲೀಕತ್ವ ಮತ್ತು ಸ್ವಾಧೀನವನ್ನು ಸುಬ್ಬಣ್ಣ ಅವರೇ ಹೊಂದಿದ್ದರು ಎಂದರೆ ಸರಿ. ಸುಬ್ಬಣ್ಣ ರವರು ದಿಃ19.11.2018 ರಂದು ತೀರಿಕೊಂಡಿದ್ದಾರೆ ಎಂದರೆ ಸರಿ. ಸುಬ್ಬಣ್ಣ ಅವರ ಮರಣದ ನಂತರ ದಾವಾ ಐಟಂ ನಂ.2 ಸ್ವತ್ತಿನ ಮಾಲೀಕತ್ವ ಮತ್ತು ಸ್ವಾಧೀನಮ್ನು ಒಂದು ಮತ್ತು ಎರಡನೇ ಪ್ರತಿವಾದಿಗಳು ಹೊಂದಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ. 2 ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅ ಕ್ರಮ ಲಾಭ ಪಡೆಯಲು ಸುಳ್ಳು ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.